**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 266 ಗ್ರಾಪಂಅ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 08-05-2015.

**ಸುತ್ತೋಲೆ**

ವಿಷಯ: ಸ್ಥಳೀಯ ಯೋಜನಾ ಪ್ರದೇಶ /ನಗರಾಭಿವೃದ್ಧಿ ಪ್ರಾಧಿಕಾರದ ಹೊರಗಡೆಯಿರುವ ಪ್ರದೇಶಗಳಲ್ಲಿನ ಕುಟುಂಬದ ಆಸ್ತಿಗಳು ಪಾಲುದಾರಿಕೆ/ ಪಾಲುದಾರಿಕೆಯಾದ ನಂತರ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 9, 11ಎ ಮತ್ತು 11 ಬಿ ನೀಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013 (ಭಾ-6) ದಿನಾಂಕ: 03-02-2014.
2) ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 86 ಗ್ರಾಪಂಅ 2014 ದಿನಾಂಕ: 11-11-2014.
3) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 132 ಗ್ರಾಪಂಅ 2015 ದಿನಾಂಕ: 19-03-2015.

------

1. ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಮತ್ತು ಕ್ರಮಬದ್ಧವಲ್ಲದ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 9, 11ಎ ಮತ್ತು 11 ಬಿ ನೀಡುವಾಗ ಅನುಸರಿಸಬೇಕಾದ ಕಾರ್ಯವಿಧಾನದ ಬಗ್ಗೆ ಪರಿಷ್ಕೃತ ಸೂಚನೆಗಳನ್ನು ಸವಿವರವಾಗಿ ತಿಳಿಸಲಾಗಿದೆ. ಉಲ್ಲೇಖ (2) ರ ಪತ್ರದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಭೂ ಪರಿವರ್ತಿತ ಜಮೀನುಗಳಲ್ಲಿನ ವಿನ್ಯಾಸ ಅನುಮೋದನೆಗಾಗಿ ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳು ಅನುಸರಿಸಬೇಕಾದ ವಿಧಾನಗಳ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿ ಸವಿವರವಾಗಿ ತಿಳಿಸಲಾಗಿದೆ.

2. ಉಲ್ಲೇಖ (2) ರ ಪತ್ರದಲ್ಲಿನ ಮಾರ್ಗಸೂಚಿಗಳನ್ನು ಅನುಷ್ಠಾನ ಮಾಡುವುದರಿಂದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೆಲವು ತೊಂದರೆಗಳನ್ನು ಅನುಭವಿಸುತ್ತಿದ್ದು, ಸದರಿ ಮಾರ್ಗಸೂಚಿಗಳನ್ನು ಸರಳೀಕರಣಗೊಳಿಸಲು ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರಿಂದ ಬೇಡಿಕೆ ಬಂದಿದ್ದರ ಮೇರೆಗೆ ಇವುಗಳನ್ನು ಪರಿಶೀಲಿಸಿ ಸದರಿ ಮಾರ್ಗಸೂಚಿಗಳಲ್ಲಿ ಮಾರ್ಪಾಡುಗಳನ್ನು ಉಲ್ಲೇಖ (3) ರ ಸರ್ಕಾರದ ಸುತ್ತೋಲೆಯಲ್ಲಿ ಮಾಡಲಾಗಿದೆ. ಉಲ್ಲೇಖ (2) ಮತ್ತು (3) ರಲ್ಲಿನ ಮಾರ್ಗಸೂಚಿಗಳನ್ನು ಖಾಸಗಿಯಾಗಿ ಬಡಾವಣೆ ರಚನೆ/ವಿನ್ಯಾಸ (ಲೇ ಔಟ್ ಪ್ಲಾನ್) ಮಾಡುವವರು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ. ಇದನ್ನು ಪಾಲಿಸಿರುವ ಬಗ್ಗೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು ಅನುಷ್ಠಾನ/ಮೇಲ್ವಿಚಾರಣೆ ಮಾಡಲು ಕಡ್ಡಾಯವಾಗಿ ಕ್ರಮ ವಹಿಸುವಂತೆ ತಿಳಿಸಲಾಗಿದೆ.

3. ಆದಾಗ್ಯೂ ವೈಯಕ್ತಿಕ ಕುಟುಂಬದ ಆಸ್ತಿಗಳು ಪಾಲುದಾರಿಕೆ/ ಪಾಲುದಾರಿಕೆಯಾದ ನಂತರ ಆಸ್ತಿಗಳ ದಾಖಲೀಕರಣಕ್ಕೆ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರು ಸರ್ಕಾರಕ್ಕೆ ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಿದೆ. ಈ ಹಿನ್ನೆಲೆಯಲ್ಲಿ, ಸ್ಥಳೀಯ ಯೋಜನಾ ಪ್ರದೇಶ/ನಗರಾಭಿವೃದ್ಧಿ ಪ್ರಾಧಿಕಾರದ ಹೊರಗಡೆಯಿರುವ ಪ್ರದೇಶಗಳಿಗೆ ಸಂಬಂಧಿಸಿದಂತೆ ವೈಯಕ್ತಿಕ ಕುಟುಂಬದ ಆಸ್ತಿಗಳಿಗೂ ಪಾಲುದಾರಿಕೆ/ಪಾಲುದಾರಿಕೆಯಾದ ನಂತರ ಆಸ್ತಿಗಳ ದಾಖಲೀಕರಣಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ

**ವ್ಯಾಪ್ತಿಯಲ್ಲಿನ ಕ್ರಮಬದ್ಧ ಮತ್ತು ಕ್ರಮಬದ್ಧವಲ್ಲದ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 9, 11ಎ ಮತ್ತು 11 ಬಿ ನೀಡಲು ಈ ಕೆಳಕಂಡ ವಿಧಾನವನ್ನು ಅನುಸರಿಸುವಂತೆ ಸೂಚಿಸಿದೆ.**

(i) ಇ-ಸ್ವತ್ತು ಪ್ರಕ್ರಿಯೆಯಲ್ಲಿ ವಿಧಿ-ವಿಧಾನಗಳು ವೈಯಕ್ತಿಕ ಕುಟುಂಬ ಆಸ್ತಿಯ ಪಾಲುದಾರಿಕೆಯ ಆಸ್ತಿ ನೋಂದಣಿಗೆ ಲೇಔಟ್ ಅನುಮೋದನೆ ಅಗತ್ಯವಿಲ್ಲ. ಆದರೆ ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲೆಗಳನ್ನು ಪಡೆಯಬೇಕಾದರೆ ನೋಂದಾಯಿತ ಪಾಲುದಾರಿಕೆ ಪತ್ರವನ್ನು ಮೂಲ ದಾಖಲೆಯನ್ನಾಗಿ ಒದಗಿಸಬೇಕು. ಪಾಲುದಾರಿಕೆ ನೋಂದಾಯಿತವಾಗದಿದ್ದರೆ ನಿಗದಿಪಡಿಸಿದ ಮುದ್ರಾಂಕ ಶುಲ್ಕವನ್ನು ಪಾವತಿಸಿ ದಾಖಲೆಗೆ ಅರ್ಜಿ ಸಲ್ಲಿಸಬೇಕು.

(ii) ಲೇಔಟ್‌ಗಳನ್ನು ನಿರ್ಮಿಸಲು ಹಾಗೂ ಬೇರೆ ಬೇರೆಯವರಿಗೆ ನಿವೇಶನಗಳನ್ನು ಮಾರಾಟ ಮಾಡುವವರು ಈಗಾಗಲೇ ಹೊರಡಿಸಿರುವ ಸುತ್ತೋಲೆಗಳಲ್ಲಿನ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

(iii) ಕರ್ನಾಟಕ ಭೂಕಂದಾಯ ಅಧಿನಿಯಮ, 1964 ರ ಪ್ರಕರಣ. 95(2) ರನ್ವಯ ಭೂ ಪರಿವರ್ತನೆ ಮಾಡಲಾಗುವ ಪ್ರಕರಣಗಳಲ್ಲಿ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ) ಸಂಬಂಧಿಸಿದ ತಹಶೀಲ್ದಾರ್ ರವರಿಗೆ ಅರ್ಜಿಯೊಂದಿಗೆ ನಿಗದಿತ ಮೊತ್ತವನ್ನು ಪಾವತಿಸಿದ ನಂತರ;

ಅ) ಪೋಡಿಯಾಗದ ಪ್ರಕರಣಗಳಿಗೆ ನಮೂನೆ 11 ಬಿ ಅನ್ನು ನೀಡುವುದು.

ಆ) ಪೋಡಿ ಹಾಗೂ ಪ್ರತ್ಯೇಕ ಹಿಸ್ಸಾ ನಂಬರ್ ಪಡೆದಿದ್ದ ಪ್ರಕರಣಗಳಿಗೆ ನಮೂನೆ 9 ಮತ್ತು 11ಎ ನ್ನು ನೀಡುವುದು. (ಇದು Single Site Plan Approval ರೀತಿ ಆಗುತ್ತದೆ)

(iv) ಗ್ರಾಮ ಪಂಚಾಯತಿಗಳು ಇ-ಸ್ವತ್ತು ತಂತ್ರಾಂಶದ ಮೂಲಕ ಆಸ್ತಿಗಳಿಗೆ ನಮೂನೆ 9, 11ಎ ಮತ್ತು 11ಬಿ ನೀಡಲು 1) ಪಹಣಿ (ಆರ್‌ಟಿಸಿ) 2) ಗ್ರಾಮ ಲೆಕ್ಕಿಗ ನೀಡುವ ರೆವಿನ್ಯೂ ಸ್ಕೆಚ್, 3) ಭೂ ಪರಿವರ್ತನೆ ಆದೇಶ / ಹಿಂಬರಹ 4) ಕ್ರಯ ಪತ್ರ/ವಿಭಾಗಪತ್ರ/ವಂಶ ಪಾರಂಪರ ಪತ್ರ ಮತ್ತು 5) ಸಿಂಗಲ್ ಸೈಟ್ ಪ್ಲಾನ್ ನೀಡಬೇಕಾಗುತ್ತದೆ.

4. ಈ ಮೇಲ್ಕಂಡಂತೆ ಸುತ್ತೋಲೆಯ ಅಂಶಗಳನ್ನು ಪರಿಪಾಲಿಸಬೇಕೆಂದು ಈ ಮೂಲಕ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ಸೂಚಿಸಿದೆ.

1/5/15

(ಕೆ. ಯಾಲಕ್ಕಿಗೌಡ)
ನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿಗಳು.
2) ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
3) ಎಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು.
4) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
5) ಹೆಚ್ಚುವರಿ ಪ್ರತಿ.